

بِسْمِ اللّٰهِ الرَّحْمٰنِ الرَّحِيم

# ಜರ್ಮನ್ ಜಲ್ಸ –2017. ಉತ್ತಮ ಗುಣ ನಡತೆಗಳ ಕುರಿತು ಉಪದೇಶ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಜರ್ಮನಿಯ **'ಜಲ್ಸ್ ಗಾಹ್'**ನಿಂದ **25–08–2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್. ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ನಾವು ಇಲ್ಲಿ ಜಲ್ಸಕ್ಕೋಸ್ಕರ ಜಮಾಯಿಸಿದ್ದೇವೆ. ಪ್ರತಿಯೊಬ್ಬ ಅಹ್ಮದಿಗೆ ತಿಳಿದಿರುವ ಹಾಗೆ ನಾವು ಇಲ್ಲಿಗೆ ಬಂದು ಒಗ್ಗೂಡಿರುವುದು ಯಾವುದೇ ಲೌಕಿಕವಾದ ಘೋಷಣೆ ಕೂಗಲು ಅಥವಾ ಯಾವುದೇ ಲೌಕಿಕ ಲಾಭ ಪಡೆಯುವ ಉದ್ದೇಶದಿಂದಲ್ಲ. ನಾವು ಇಲ್ಲಿನ ಕಾರ್ಯಕ್ರಮಗಳಲ್ಲಿ ಸೇರಿಕೊಂಡಿರುವುದು ಒಂದು ಆಧ್ಯಾತ್ಮಿಕ ಪರಿಸರದಲ್ಲಿ ಇದ್ದುಕೊಂಡು ನಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಉತ್ತಮಪಡಿಸಲಿಕ್ಕಾಗಿದೆ. ನಮ್ಮ ಧಾರ್ಮಿಕ ಜ್ಞಾನವನ್ನು ವರ್ಧಿಸಲಿಕ್ಕಾಗಿಯೂ ನಮ್ಮ ವಿಶ್ವಾಸದ ಸ್ಥಿತಿಯನ್ನು ಉತ್ತಮಪಡಿಸಲಿಕ್ಕಾಗಿಯೂ ಆಗಿದೆ. ನಮ್ಮ ಧಾರ್ಮಿಕ ಕರ್ಮಗಳನ್ನು ಉತ್ತಮ ಪಡಿಸಿ ತಖ್ವವನ್ನು ನಮ್ಮಲ್ಲಿ ಅಳವಡಿಸಿಕೊಂಡು ಅಲ್ಲಾಹನ ಹಕ್ಕುಗಳನ್ನೂ ಅವನ ದಾಸರ ಹಕ್ಕುಗಳನ್ನೂ ಈಡೇರಿಸಿ ಕೊಡುವವರಾಗಲಿಕ್ಕೋಸ್ಕರವಾಗಿದೆ. ಆದುದರಿಂದ ನಾವು ಜಲ್ಸಕ್ಕೆ ಬಂದು ಸೇರುವುದರ ಈ ಉದ್ದೇಶ ಲಕ್ಷ್ಯಗಳನ್ನು ನಾವು ಯಾವಾಗಲೂ ನಮ್ಮ ಮುಂದೆ ಇರಿಸಿಕೊಳ್ಳಬೇಕಾಗಿದೆ.

ಈಗ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಉಲ್ಲೇಖಗಳನ್ನು ನಿಮ್ಮ ಮುಂದೆ ಇರಿಸುವೆನು. ನಂಬಿಕೆಯ ಪ್ರಭಾವ ಕರ್ಮಗಳ ಮೇಲೆ ಸಹ ಉಂಟಾಗುತ್ತದೆ ಎಂಬುದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಇಸ್ಲಾಮ್ ಎರಡು ಭಾಗಗಳನ್ನು ಹೊಂದಿದೆ. ಒಂದು, ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡಬಾರದು. ಅವನ ಔದಾರ್ಯಗಳಿಗೆ ಕೃತಜ್ಞರಾಗಿ ಅವನನ್ನು ಸಂಪೂರ್ಣವಾಗಿ ಅನುಸರಿಸಬೇಕು ಎಂಬುದಾಗಿದೆ. ಎರಡನೆಯದು, ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ಗುರುತಿಸಿ ಅರ್ಹವಾದ ರೀತಿಯಲ್ಲಿ ಆ ಹಕ್ಕುಗಳನ್ನು ಈಡೇರಿಸಿಕೊಡಬೇಕು ಎಂದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಸಹ ಹೇಳಿದ್ದಾರೆ: ಯಾರು ನ್ಯೂನತೆಯಿಲ್ಲದ ಸತ್ಯವಾದ ವಿಶ್ವಾಸವನ್ನು ಅವಲಂಬಿಸುತ್ತಾನೋ ಮತ್ತು ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡುವುದಿಲ್ಲವೋ ಅಂತಹ ವ್ಯಕ್ತಿಯಿಂದ ಸತ್ಕರ್ಮಗಳು ತಾನಾಗಿಯೇ ಪ್ರಕಟವಾಗುತ್ತವೆ. ಈ ಕಾರಣದಿಂದಲೇ ಮುಸ್ಲಿಮರು ಸತ್ಯವಾದ ವಿಶ್ವಾಸಗಳನ್ನು ತ್ಯಜಿಸಿದಾಗ ಕೊನೆಗೆ ಅವರು ದಜ್ಜಾಲ್ ಮೊದಲಾದವರನ್ನು ದೇವನೆಂದು ಪರಿಗಣಿಸಲು ತೊಡಗಿದರು. ಈಗ ನಾವು ನೋಡುತ್ತಿದ್ದೇವೆ, ದೊಡ್ಡ ದೊಡ್ಡ ಸರಕಾರಗಳು ಸಹ ಲೌಕಿಕ ಶಕ್ತಿ ಸಾಮರ್ಥ್ಯಗಳನ್ನು ದೇವನೆಂದು ನಂಬಲು ತೊಡಗಿದ್ದಾರೆ ಮತ್ತು ಅವುಗಳ ಜೋಳಿಗೆಗಳಲ್ಲಿ ಬೀಳಲು ಪ್ರಾರಂಭಿಸಿದ್ದಾರೆ. ಇಂದಿನ ಕಾಲದಲ್ಲಿ ಇದು ನಮಗೆ ಎಲ್ಲ ಕಡೆಗಳಲ್ಲೂ ಕಂಡು ಬರುತ್ತಾ ಇದೆ. ಮುಸ್ಲಿಮ್ ವ್ಯಕ್ತಿಗಳಿಂದ ಪ್ರಾರಂಭಿಸಿ ಸರಕಾರಗಳ ಸ್ಥಿತಿ ಸಹ ಹೀಗೆಯೇ ಇದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಪದೇ ಪದೇ ನನ್ನೊಂದಿಗೆ ಹೇಳಿದ್ದಾನೆ: **ಅಲ್‌ಖೈರು ಕುಲ್ಲುಹೂ ಫಿಲ್ ಖುರ್‌ಆನ್.** ಎಲ್ಲ ಅನುಗ್ರಹಗಳು ಪವಿತ್ರ ಖುರ್‌ಆನ್‌ನಲ್ಲಿವೆ. ಪವಿತ್ರ ಖುರ್‌ಆನ್ ಉಪದೇಶಿಸುವುದೇನೆಂದರೆ ಅಲ್ಲಾಹನು ಏಕನೂ ಸಹಭಾಗಿ ಇಲ್ಲದವನೂ ಆಗಿದ್ದಾನೆಂಬ ಸತ್ಯಾಂಶವನ್ನಾಗಿದೆ. ಎಲ್ಲ ಒಳಿತುಗಳು ಪವಿತ್ರ ಖುರ್‌ಆನ್‌ನಲ್ಲಿವೆ. ಅವುಗಳನ್ನು ಗಳಿಸಲು ಪ್ರಯತ್ನಿಸಬೇಕು. ಅಲ್ಲಾಹನನ್ನು ಆರಾಧಿಸಬೇಕು ಮತ್ತು ಅವನ ಹಕ್ಕುಗಳನ್ನು ಈಡೇರಿಸಬೇಕು. ಅದೇರೀತಿ ಅಲ್ಲಾಹನ ದಾಸರ ಹಕ್ಕುಗಳನ್ನೂ ಈಡೇರಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಈ ಜಮಾಅತನ್ನು ಸ್ಥಾಪಿಸಿರುವ ಉದ್ದೇಶವೇನೆಂದರೆ ಅಲ್ಲಾಹನ ಬಗ್ಗೆ ಸೂಕ್ಷ್ಮಜ್ಞಾನವನ್ನು ಜನರು ಗಳಿಸುವಂತಾಗಬೇಕು. ಪ್ರಾರ್ಥನೆ ಮತ್ತು ಆರಾಧನೆಗಳ ವಾಸ್ತವಿಕತೆಯ ಅರಿವು ಗಳಿಸಬೇಕು. ಒಬ್ಬನು ಕೇವಲ ಪ್ರಾರ್ಥನೆ ಮಾತ್ರ ಮಾಡುತ್ತಾ ಇದ್ದು ಪ್ರಯತ್ನ ಮಾಡುವುದಿಲ್ಲವಾದರೆ ಅವನು ತಪ್ಪು ಮಾಡುವವನಾಗಿದ್ದಾನೆ. ಅದೇ ರೀತಿ ತನ್ನ ಪ್ರಯತ್ನಗಳು ಮಾತ್ರ ಸಾಕು ಎಂದು ಭಾವಿಸುವವನು ನಾಸ್ತಿಕನಾಗಿದ್ದಾನೆ. ಆದರೆ ಪ್ರಾರ್ಥನೆಯನ್ನು ಮತ್ತು ಪ್ರಯತ್ನವನ್ನು ಪರಸ್ಪರ ಜೊತೆಗೂಡಿಸುವುದೇ ಇಸ್ಲಾಮ್ ಆಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪಾಪ ಮತ್ತು ನಿರ್ಲಕ್ಷ್ಯತೆಯಿಂದ ರಕ್ಷಣೆ ಪಡೆಯಲು ಸರ್ವ ಸಾಮರ್ಥ್ಯ ಬಳಸಿ ಪ್ರಯತ್ನಿಸಿರಿ. ಅದೇ ರೀತಿ ನಿಮ್ಮ ಸರ್ವ ಸಾಮರ್ಥ್ಯ ಬಳಸಿ ಪ್ರಾರ್ಥಿಸಿರಿ. ಇದೇ ಕಾರಣದಿಂದ ಪವಿತ್ರ ಖುರ್‌ಆನಿನ ಆರಂಭದಲ್ಲಿಯೇ ಸೂರತುಲ್ ಫಾತಿಹದಲ್ಲಿ ಈ ಎರಡು ವಿಷಯಗಳನ್ನು ಪರಿಗಣಿಸಿ ಉಪದೇಶಿಸಲಾಗಿದೆ: ಸತ್ಯ ವಿಶ್ವಾಸಿ **ಇಯ್ಯಾಕನಅ್‌ಬುದು** ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ ಎಂದು ಹೇಳುವಾಗ ತಕ್ಷಣ ಅವನ ಹೃದಯದಲ್ಲಿ ಹೀಗೆ ಯೋಚನೆ ಸ್ಫುರಿಸುತ್ತದೆ: ಅಲ್ಲಾಹನ ಅನುಗ್ರಹ ದೊರಕದೆ ಅವನ ಆರಾಧನೆ ಮಾಡಲು ನನಗೆ ಹೇಗೆ ತಾನೆ ಸಾಧ್ಯ? ಆದುದರಿಂದ ಅವನು ಅದರೊಂದಿಗೆ ಹೇಳುತ್ತಾನೆ: **ಇಯ್ಯಾಕ ನಸ್ತಈನ್** ಸಹಾಯವನ್ನೂ ನಿನ್ನಿಂದಲೇ ನಾವು ಯಾಚಿಸುತ್ತೇವೆ. ಎಂದರೆ ಸಹಾಯವನ್ನು ಸಹ ಅಲ್ಲಾಹನಿಂದ ಬೇಡಿಕೊಳ್ಳಲಾಗುತ್ತಿದೆ. ಇದೊಂದು ಸೂಕ್ಷ್ಮ ವಿಚಾರವಾಗಿದೆ. ಇಸ್ಲಾಮ್ ಹೊರತು ಬೇರೆ ಯಾವ ಧರ್ಮವೂ ಇದನ್ನು ಮನವರಿಕೆ ಮಾಡಿಕೊಂಡಿಲ್ಲ. ಈ ಕಾಲದಲ್ಲಿ ಜನರ ಸ್ಥಿತಿ ಹೇಗಿದೆ ಎಂದರೆ ನಾನು ನೋಡುತ್ತಿದ್ದೇನೆ, ಅವರು ಪ್ರಯತ್ನ ಮಾಡುತ್ತಾರೆ ಆದರೆ ಪ್ರಾರ್ಥನೆ ಮಾಡುವ ಬಗ್ಗೆ ನಿರ್ಲಕ್ಷಿಸಲಾಗುತ್ತದೆ. ಸಾಧನ ಸಾಮಗ್ರಿಗಳ ಬಗ್ಗೆ ಎಷ್ಟು ವಿಶ್ವಾಸ ವರ್ಧಿಸಿದೆ ಎಂದರೆ ಪ್ರಯತ್ನಗಳನ್ನೇ ದೇವನೆಂದು ಮಾಡಲಾಗಿದೆ. ಪ್ರಾರ್ಥನೆ ಬಗ್ಗೆ ಪರಿಹಾಸ ಮಾಡಲಾಗುತ್ತಿದೆ ಮತ್ತು ಅದನ್ನು ನಿಷ್ಪ್ರಯೋಜಕ ಎಂದು ಹೇಳಲಾಗುತ್ತಿದೆ. ಇದೆಲ್ಲಾ ಯುರೋಪನ್ನು ಅನುಕರಣೆ ಮಾಡುವುದರಿಂದ ಸಂಭವಿಸಿದೆ. ಇದೊಂದು ಅಪಾಯಕರ ವಿಷವಾಗಿದ್ದು ಲೋಕದಲ್ಲೆಲ್ಲಾ ಇದು ಹಬ್ಬುತ್ತಾ ಇದೆ. ಆದರೆ ಅಲ್ಲಾಹನು ಈ ವಿಷಯವನ್ನು ದೂರ ಸರಿಸಲು ಇಚ್ಛಿಸುತ್ತಾನೆ. ಆ ಕಾರಣದಿಂದ ಈ ಜಮಾಅತನ್ನು ಸ್ಥಾಪಿಸಿದ್ದಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಎಲ್ಲಾ ಜನರು ನೆನಪಿಟ್ಟುಕೊಳ್ಳಬೇಕು, ಕೇವಲ ಆಚಾರ ರೂಪದಲ್ಲಿ ಬೈಅತ್ ಮಾಡಿ ನನ್ನನ್ನು ಇಮಾಮ್ ಎಂದು

ಅಂಗೀಕರಿಸುವುದು ಮಾತ್ರ ಮೋಕ್ಷ ದೊರಕಲು ಖಂಡಿತವಾಗಿಯೂ ಸಾಕಾಗಲಾರದು. ಏಕೆಂದರೆ ಅಲ್ಲಾಹನು ಹೃದಯಗಳನ್ನು ನೋಡುತ್ತಾನೆ. ಅವನು ಬಾಯಿ ಮಾತುಗಳ ಕಡೆಗೆ ನೋಡುವುದಿಲ್ಲ. ಮೋಕ್ಷ ದೊರಕಲು ಆವಶ್ಯಕವಾದುದೇನೆಂದು ಅಲ್ಲಾಹನು ಪದೇ ಪದೇ ಹೇಳಿದ್ದಾನೆ. ಮೊದಲನೆಯದಾಗಿ ಸತ್ಯ ಹೃದಯದಿಂದ ಅಲ್ಲಾಹನು ಏಕನೂ ಸಹಭಾಗಿ ಇಲ್ಲದವನೂ ಎಂದು ನಂಬಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸತ್ಯಸಂಧನಾದ ಪ್ರವಾದಿ ಎಂದು ನಂಬಬೇಕು ಮತ್ತು ಪವಿತ್ರ ಖುರ್ಆನ್ ಅಲ್ಲಾಹನ ಗ್ರಂಥವಾಗಿದೆ ಎಂದು ನಂಬಬೇಕು. ಅದು ಎಂತಹ ಗ್ರಂಥವಾಗಿದೆ ಎಂದರೆ ಖಿಯಾಮತ್ ತನಕ ಇನ್ನು ಮುಂದೆ ಯಾವುದೇ ಗ್ರಂಥವಾಗಲಿ ಶರೀಅತ್ ಆಗಲಿ ಅವತೀರ್ಣವಾಗಲಾರದು.

ಅನೇಕ ಜನರು ಹೀಗೆ ಆಕ್ಷೇಪಿಸುತ್ತಾರೆ. ಈ ಜಮಾಅತಿನ ಆವಶ್ಯಕತೆ ಏನಿದೆ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಮಿಸಿ ಹೊಸ ಜಮಾಅತ್ ಸ್ಥಾಪಿಸುವ ಆವಶ್ಯಕತೆ ಏನಿತ್ತು? ಈ ಪ್ರಶ್ನೆಗಳಿಗೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ಜಮಾಅತ್ ಸ್ಥಾಪಿಸುವ ಕಾರಣವೇನೆಂದರೆ ಮುಸ್ಲಿಮರ ವಿಶ್ವಾಸದ ಸ್ಥಿತಿ ತೀರಾ ಬಲಹೀನವಾಗುತ್ತಾ ವಿಶ್ವಾಸದ ಶಕ್ತಿಯೇ ನಶಿಸಿ ಹೋಗುವ ಸ್ಥಿತಿಯುಂಟಾಗಿದೆ. ಆದುದರಿಂದ ಈ ಜಮಾಅತಿನ ಮೂಲಕ ನೈಜ ವಿಶ್ವಾಸದ ಆತ್ಮವನ್ನು ಊದಲು ಅಲ್ಲಾಹನು ಇಚ್ಛಿಸಿದ್ದಾನೆ. ಆದುದರಿಂದ ಆಕ್ಷೇಪ ಮಾಡುವವರ ಆಕ್ಷೇಪಗಳು ಅನಾವಶ್ಯಕವೂ ನಿರರ್ಥಕವೂ ಆಗಿವೆ. ಇಂತಹ ಅನುಮಾನಗಳು ಯಾರ ಹೃದಯದಲ್ಲಿಯೂ ಖಂಡಿತವಾಗಿಯೂ ಉದ್ಭವಿಸಬಾರದೆಂದು ನೆನಪಿಡಿರಿ. ಈ ವಿಷಯದ ಬಗ್ಗೆ ಚೆನ್ನಾಗಿ ಚಿಂತಿಸುವುದಾದರೆ ಇಂತಹ ಅನುಮಾನಗಳು ಎಂದೂ ತಲೆದೋರಲಾರವು. ನಾವು ಎಂತಹ ನೈಜ ಶಾಂತಿ ಸಮಾಧಾನವನ್ನು ಸ್ಥಾಪಿಸಲು ಇಚ್ಛಿಸುತ್ತೇವೆಂದರೆ ಅದು ಮನುಷ್ಯನನ್ನು ಪಾಪ ಎಂಬ ಮರಣದಿಂದ ರಕ್ಷಿಸುವುದು. ಆಚಾರಗಳನ್ನು ಮತ್ತು ಅಭ್ಯಾಸಗಳನ್ನು ಅನುಸರಿಸುವ ಜನರಲ್ಲಿ ಇಂತಹ ವಿಷಯಗಳಿರುವುದಿಲ್ಲ. ಅವರು ಬಾಹ್ಯವಾದುದರ ಮೇಲೆ ದೃಷ್ಟಿ ಇರಿಸುವವರಾಗಿದ್ದಾರೆ. ಅವರು ವಾಸ್ತವಿಕತೆ ಮೇಲೆ ದೃಷ್ಟಿ ಇರಿಸುವವರಾಗಿಲ್ಲ. ಅವರ ಕೈಯಲ್ಲಿ ತಿರುಳಿಲ್ಲದ ಸಿಪ್ಪೆ ಮಾತ್ರ ಇದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅಲ್ಲಾಹನು ನಿಯೋಜಿಸಿದ ಉದ್ದೇಶ, ಜನರು ಅಲ್ಲಾಹನೊಂದಿಗೆ ವಾಸ್ತವಿಕ ಸಾಮೀಪ್ಯ ಹೊಂದುವಂತೆ ಮಾಡುವುದು, ಜನರ ಕರ್ಮಗಳ ಸ್ಥಿತಿಯ ಸುಧಾರಣೆ ಮಾಡುವುದು ಮತ್ತು ಪವಿತ್ರ ಖುರ್ಆನಿನ ಅಧಿಕಾರವನ್ನು ಜನರಲ್ಲಿ ಜಾರಿಗೊಳಿಸುವಂತೆ ಮಾಡುವುದಾಗಿದೆ. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವ ನಾವು ನಮ್ಮ ವಿಶ್ವಾಸದ ಮತ್ತು ಕರ್ಮದ ಸ್ಥಿತಿಯನ್ನು ಅವರ ಉಪದೇಶಗಳ ಪ್ರಕಾರ ಸುಧಾರಣೆ ಮಾಡುವುದು ಆವಶ್ಯಕವಾಗಿದೆ. ನಮ್ಮ ಬೈಅತ್ ವಾಸ್ತವಿಕ ರೂಪ ಪಡೆದಿದೆಯೇ ಅಥವಾ ಕೇವಲ ಬಾಯಿ ಮಾತುಗಳಿಗೆ ಸೀಮಿತವಾಗಿದೆಯೇ ಎಂದು ಸಹ ನಾವು ನೋಡಬೇಕಾಗಿದೆ. ನಾವು ಆರಾಧನೆ ಮಾಡುವುದು ಅಲ್ಲಾಹನನ್ನು ಏಕನೂ ಸಹಭಾಗಿ ಇಲ್ಲದವನೂ ಎಂಬ ನಂಬಿಕೆಯಿಂದಲೋ ಅಥವಾ ಅಲ್ಲವೋ? ಅನೇಕ ಅಹ್ಮದಿಯರು ಸಹ ಹೇಗಿದ್ದಾರೆಂದರೆ ಅವರು ಐದು ಹೊತ್ತಿನ ನಮಾಝ್ ಸಹ ನಿರ್ವಹಿಸುವುದಿಲ್ಲ. ಅವರು ನನ್ನನ್ನು ಭೇಟಿಯಾಗುವಾಗ ಹೇಳುತ್ತಾರೆ: ನಾವು ಐದು ಹೊತ್ತಿನ ನಮಾಝ್ ನಿರ್ವಹಿಸುವವರಾಗಲು ಪ್ರಾರ್ಥಿಸಿರಿ ಎಂದು. ಆದರೆ ನಮಾಝ್ ಅನುಷ್ಠಿಸುವುದು ಮೂಲಭೂತ ಕರ್ಮವಾಗಿದ್ದು ಪ್ರತಿಯೊಬ್ಬ ಅಹ್ಮದಿಗೆ ಕಡ್ಡಾಯವಾಗಿದೆ. ಪ್ರತಿಯೊಬ್ಬ ಸತ್ಯವಿಶ್ವಾಸಿಗೆ ಅದು ಕಡ್ಡಾಯವಾದ ಕರ್ಮವಾಗಿದೆ. ಪ್ರತಿಯೊಬ್ಬ ಮುಸ್ಲಿಮನಿಗೆ ಅದು ಫರ್ಝ್ ಆಗಿದೆ. ಬೈಅತ್ ಮಾಡಿದ ಅಹ್ಮದಿಯರು ಹೃತ್ಪೂರ್ವಕ ಉತ್ಸಾಹ ಭರಿತರಾಗಿ ನಮಾಝ್ ನಿರ್ವಹಿಸುವವರಾಗಬೇಕು. ಜನರು ಪೂರ್ಣವಾಗಿ ನಮಾಝ್ ನಿರ್ವಹಿಸದೆ, ನಾವು ನಮಾಝ್ ನಿರ್ವಹಿಸುವವರಾಗಲು ಪ್ರಾರ್ಥಿಸಿರಿ ಎಂದು ಹೇಳುತ್ತಾರೆ. ನಾವು ನಮಾಝ್ ಸರಿಯಾಗಿ ನಿರ್ವಹಿಸುವುದಿಲ್ಲ ಎಂಬ ಪ್ರಜ್ಞೆ ಇರುವವರು ತಾವೇ ಸ್ವತಃ ಅದಕ್ಕೆ ಪರಿಹಾರ ಮಾರ್ಗ ಹುಡುಕಬೇಕು. ಅವರು ಸ್ವತಃ ಏಕೆ ಪ್ರಯತ್ನಿಸುವುದಿಲ್ಲ. ಸ್ವತಃ ಏಕೆ ಪ್ರಾರ್ಥಿಸುವುದಿಲ್ಲ. **ಇಯ್ಯಾಕ ನಅ್‌ಬುದು ವಇಯ್ಯಾಕ ನಸ್ತಈನ್** ಎಂದು ಹೇಳುವಾಗ ಅವರು ಕೇವಲ ನಾಲಗೆಯಿಂದ ಉಚ್ಚರಿಸದೆ ಹೃದಯದ ಅಂತರಾಳದಿಂದ ಶಬ್ದಗಳನ್ನು ಪುನರಾವರ್ತಿಸುತ್ತಾ ಅವುಗಳನ್ನು ಅನುಷ್ಠಾನಕ್ಕೆ ಏಕೆ ತರುವುದಿಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸತ್ಯಸಂಧರಾದ ಪ್ರವಾದಿ ಎಂದು ನಂಬುವಾಗ ಅವರ ಪ್ರತಿಯೊಂದು ನಡೆವಳಿಕೆ ನಮಗೆ ಅತ್ಯುತ್ತಮ ಮಾದರಿಯಾಗುತ್ತದೆ. ಆರಾಧನೆಗಳ ಜೊತೆಗೆ ಹಝ್ರತ್ ಮುಹಮ್ಮದ್ ಸಲಲ್ಲಾಹು ಅಲೈಹಿ ವಸಲ್ಲಮರ ಪ್ರತಿಯೊಂದು ಸ್ವಭಾವ ಗುಣಗಳು ನಮಗೆ ಮಾದರಿಯಾಗಿವೆ. ಸಾಮಾಜಿಕ ಸಂಬಂಧಗಳ ಬಗ್ಗೆ, ಮನೆಯಲ್ಲಿರುವವರ ಜೊತೆ ವ್ಯವಹಾರಗಳ ಬಗ್ಗೆ, ಪತ್ನಿಯರೊಂದಿಗೆ ಶ್ರೇಷ್ಠ ರೀತಿಯಲ್ಲಿ ವರ್ತಿಸುವ ಬಗ್ಗೆ ಮಾದರಿ ನಡೆವಳಿಕೆ ಮೂಲಕ ಅವರು ನಮಗೆ ಮಾರ್ಗದರ್ಶನ ನೀಡಿರುವರು. ಆದರೆ ಅನೇಕ ಜನರು ಹೇಗಿದ್ದಾರೆಂದರೆ ಮನೆಯಲ್ಲಿ ಜಗಳ ಮಾಡುತ್ತಾರೆ. ಅನ್ಯರ ಭಾವನೆಗಳನ್ನು ನೋಯಿಸದಿರುವ ಬಗ್ಗೆ, ಮಕ್ಕಳೊಂದಿಗೆ ವಾತ್ಸಲ್ಯದಿಂದ ವರ್ತಿಸುವ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಗೆ ಕಲಿಸಿಕೊಟ್ಟಿರುವರು. ಅನ್ಯರ ಭಾವನೆಗಳನ್ನು ಗೌರವಿಸುವ ಬಗ್ಗೆ, ಗಲಭೆ ಗೊಂದಲಗಳನ್ನು ಮಾಡದಿರುವ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒತ್ತಿ ಹೇಳಿದ್ದಾರೆ ಮತ್ತು ತಮ್ಮ ನಡೆವಳಿಕೆ ಮೂಲಕ ನಮಗೆ ತೋರಿಸಿಕೊಟ್ಟಿದ್ದಾರೆ. ಅಮಾನತ್‌ಗಳಿಗೆ ಸಂಬಂಧಿಸಿ ವಂಚನೆ ಮಾಡಬಾರದೆಂದು ಇಸ್ಲಾಮ್ ಬಲವತ್ತಾಗಿ ಉಪದೇಶಿಸಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಹು ಅಲೈಹಿ ವಸಲ್ಲಮರು ಅದನ್ನು ಅನುಷ್ಠಾನಕ್ಕೆ ತಂದು ತೋರಿಸಿದ್ದಾರೆ. ಪರಿಸ್ಥಿತಿ ಹೇಗಿದ್ದರೂ ವಿನಯದಿಂದ ವರ್ತಿಸಬೇಕೆಂದೂ ಸತ್ಯ ನಿಷ್ಠೆಯ ಉನ್ನತ ಮಟ್ಟ ಸ್ಥಾಪಿಸಬೇಕೆಂದೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಪದೇಶಿಸಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸದ್ಗುಣಗಳ ಉನ್ನತಮಟ್ಟವನ್ನು ಪ್ರತಿಯೊಂದು ವಿಷಯದಲ್ಲೂ ಪ್ರದರ್ಶಿಸಿ ತೋರಿಸಿದ್ದಾರೆ.

ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸತ್ಯವಂತರಾದ ಪ್ರವಾದಿ ಎಂದು ನಂಬುವುದಾದರೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಅವರ ಸೇವಕರಾಗಿ ನಿಯೋಜಿಸಲ್ಪಟ್ಟ ಇಮಾಮ್ ಎಂದು ನಂಬುವವರಾಗಿದ್ದರೆ ನಮ್ಮ ಆರಾಧನೆಗಳನ್ನೂ ನಮ್ಮ ಕರ್ಮಗಳನ್ನೂ ಉನ್ನತ ಮಟ್ಟ ಹೊಂದಿರುವುದಾಗಿ ಮಾಡಬೇಕು. ಪವಿತ್ರ ಖುರ್ಆನಿನ ಆಜ್ಞೆಗಳನ್ನು ನೋಡಿ ಅವುಗಳಲ್ಲಿ ಮಾಡಬೇಕೆಂದು ಹೇಳಿದ ಆಜ್ಞೆಗಳನ್ನೂ ಮಾಡಬಾರದೆಂದು ಹೇಳಿದ ಆಜ್ಞೆಗಳನ್ನೂ ನೋಡಿಕೊಂಡು ನಾವು ಏನೆಲ್ಲಾ ಮಾಡುತ್ತಿದ್ದೇವೆ ಏನೆಲ್ಲಾ ಮಾಡುತ್ತಾ ಇಲ್ಲ ಎಂದು ಪರಿಶೋಧಿಸಬೇಕಾಗಿದೆ. ನಾವು ಯಾವ ಯಾವ ಕೆಡುಕುಗಳನ್ನು ಬಿಟ್ಟಿದ್ದೇವೆ, ಯಾವ ಯಾವ ಕೆಟ್ಟ

ಕೆಡುಕುಗಳನ್ನು ಬಿಟ್ಟಿಲ್ಲ ಎಂದು ನೋಡಬೇಕಾಗಿದೆ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸ್ಥಾನವನ್ನೂ ಅವರ ವಾದಗಳನ್ನೂ ಸರಿಯಾದ ರೀತಿಯಲ್ಲಿ ಮನವರಿಕೆ ಮಾಡುವ ಆವಶ್ಯಕತೆ ಇದೆ.

ಈ ಕಾಲಘಟ್ಟ ಲೋಕದ ಜನರನ್ನು ಅಲ್ಲಾಹನಿಂದ ದೂರ ಹೋಗುವಂತೆ ಮಾಡಿದೆ. ಅದಕ್ಕಾಗಿ ಅಭಿವೃದ್ಧಿಯ ಹೆಸರಲ್ಲಿ ಪ್ರತಿದಿನ ಹೊಸ ಹೊಸ ಪ್ರಯತ್ನ ಮಾಡುತ್ತಾ ಮುಂದುವರಿಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಅಹ್ಮದಿಯರು ಮಾಡಬೇಕಾದ ಕೆಲಸವೆಂದರೆ, ಅಲ್ಲಾಹನೊಂದಿಗೆ ಸಾಮೀಪ್ಯಗಳಿಸುವ ಬಗ್ಗೆ ಮತ್ತು ಅವನ ಬಗ್ಗೆ ಸೂಕ್ಷ್ಮ ಜ್ಞಾನ ಗಳಿಸುವ ಬಗ್ಗೆ ಪ್ರಯತ್ನ ಮಾಡಬೇಕು ಮತ್ತು ಉದಿಸುವ ಪ್ರತಿಯೊಂದು ಹೊಸ ದಿನ ಅವನ ಜ್ಞಾನ ವರ್ಧಿಸುವಂತಹದಾಗಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೀತಿ ಕೇವಲ ಬಾಯಿ ಮಾತಿನದಾಗಿರಬಾರದು. ಅದನ್ನು ಪ್ರಕಟಿಸಲು ಕೇವಲ ಘೋಷಣೆ ಮಾಡಿದರೆ ಸಾಕಾಗಲಾರದು. ಅವರ ಬಗ್ಗೆ ಪ್ರೀತಿಯನ್ನು ಅವರ ನಡೆವಳಿಕೆಗಳನ್ನೂ ಅನುಸರಿಸುವ ಮೂಲಕ ಪ್ರಕಟಿಸಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರಿನಲ್ಲಿ ಘೋಷಣೆ ಕೂಗಿ ಅನಂತರ ಅದೇ ಹೆಸರಿನಲ್ಲಿ ದೌರ್ಜನ್ಯ ಮಾಡುವವರಂತೆ ನೀವು ಆಗಬಾರದು. ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹೆಸರಿನಲ್ಲಿ ಅನೇಕ ಸಂಘಟನೆಗಳು ಮತ್ತು ಸರಕಾರಗಳು ದೌರ್ಜನ್ಯ ಮಾಡುತ್ತಾ ಇವೆ. **ರಹ್ಮತುನ್ ಲಿಲ್ಆಲಮೀನ್** (ಸಕಲ ಲೋಕಗಳಿಗೆ ಅನುಗ್ರಹವಾಗಿ) ಆಗಮಿಸಿದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಈ ಜನರು ತಮ್ಮ ಕೃತ್ಯಗಳ ಮೂಲಕ ದೌರ್ಜನ್ಯದ ಗುರಿಯನ್ನಾಗಿ ಮಾಡಿರುವರು. ಆದರೆ ಅವರ ಪ್ರಯತ್ನಗಳು ಜಯಶಾಲಿಯಾಗಲಾರವು. ಏಕೆಂದರೆ ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಮಿಸಿರುವರು. ಅವರ ಜಮಾಅತಿಗೆ ಸೇರಿದ ನಾವು ಇಸ್ಲಾಮ್ ಧರ್ಮದ ನೈಜ ಚಿತ್ರವನ್ನು ಲೋಕದ ಮುಂದೆ ಇರಿಸುತ್ತಾ ಇದ್ದೇವೆ.

ಆದುದರಿಂದ ಇಸ್ಲಾಮಿನ ನೈಜ ಚಿತ್ರವನ್ನು ಲೋಕದ ಮುಂದೆ ಇರಿಸಲು ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರತಿಯೊಂದು ನಡವಳಿಕೆಯನ್ನೂ ನಮ್ಮೊಳಗೆ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು. ಪವಿತ್ರ ಖುರ್ಆನಿನ ಅಧಿಕಾರವನ್ನು ನಮ್ಮ ಮೇಲೆ ಜಾರಿಗೊಳಿಸಲು ಪ್ರಯತ್ನಿಸಬೇಕು. ನಮ್ಮ ಪ್ರತಿಯೊಂದು ಕರ್ಮ ಸತ್ಕರ್ಮವಾಗಲು ಪ್ರಯತ್ನಿಸಬೇಕು. ನಾವು ಪ್ರತಿಕ್ಷಣದಲ್ಲೂ ಶೈತಾನನಿಂದ ದೂರ ಸರಿಯಲು ಪ್ರಯತ್ನಿಸಬೇಕು. ಮತ್ತು ರಹ್ಮಾನ್ ಆಗಿರುವ ಅಲ್ಲಾಹನ ಸಮೀಪವಾಗಿರಲು ಪ್ರಯತ್ನಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಹ್ಮದಿಯೇತರ ಮುಸ್ಲಿಮರೂ ನಮಾಝ್ ಮಾಡುತ್ತಾರೆ. ಆದರೆ ಅವರಲ್ಲಿ ಬಹುತೇಕ ಜನರ ನಮಾಝ್ ಭೂಮಿಯಲ್ಲಿಯೇ ಇರುತ್ತದೆ. ಅದು ಅಲ್ಲಾಹನ ಅರ್ಶ್‌ಗೆ ತಲುಪುವುದಿಲ್ಲ. ಅರ್ಶ್‌ನ ಒಡೆಯನಾದ ಅಲ್ಲಾಹನಿಗೆ ಅಂತಹ ನಮಾಝ್‌ಗಳ ಯಾವ ಆವಶ್ಯಕತೆಯೂ ಇಲ್ಲ. ಏಕೆಂದರೆ ಅವರಲ್ಲಿ ನಿಷ್ಠೆ ಇಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮಾಝ್, ವಾಸ್ತವಿಕ ನಮಾಝ್ ಆಗಬೇಕಾದರೆ ಅಲ್ಲಾಹನೊಂದಿಗೆ ಸತ್ಯವಾದ ಮತ್ತು ಪರಿಶುದ್ಧವಾದ ಸಂಬಂಧವಿರಬೇಕು. ಅಲ್ಲಾಹನ ಸಂಪ್ರೀತಿ ಗಳಿಸಿ ಎಂತಹ ಅನುಸರಣೆ ತೋರಿಸಬೇಕೆಂದರೆ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡಬೇಕು. ಮತ್ತು ಅಲ್ಲಾಹನ ಮಾರ್ಗದಲ್ಲಿ ಜೀವ ಅರ್ಪಿಸಲು ಸಹ ಸಿದ್ಧನಾಗಬೇಕು. ಮನುಷ್ಯರಲ್ಲಿ ಇಂತಹ ಸ್ಥಿತಿ ಉಂಟಾದಾಗ ಅವರ ನಮಾಝ್ ವಾಸ್ತವಿಕ ನಮಾಝ್ ಆಗುವುದು. ಆದರೆ ಮನುಷ್ಯರಲ್ಲಿ ಈ ಸ್ಥಿತಿ ವಾಸ್ತವಿಕವಾಗಿ ಉಂಟಾಗುವ ತನಕ ಸತ್ಯವಾದ ನಿಷ್ಠೆಯನ್ನು ಪ್ರದರ್ಶಿಸದೆ ಇರುವ ತನಕ ಅವನ ನಮಾಝ್ ಮತ್ತು ಇತರ ಕರ್ಮಗಳು ಪ್ರಭಾವ ರಹಿತವಾಗಿಯೇ ಇರುವುವು.

ವಾಸ್ತವಿಕ ಒಳಿತು ಏನೆಂದು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ತಖ್ವ ಎಂದರೆ ಕೆಟ್ಟ ಕೆಲಸಗಳ ಸೂಕ್ಷ್ಮ ಮಾರ್ಗಗಳಿಂದಲೂ ತನ್ನನ್ನು ರಕ್ಷಿಸಿಕೊಳ್ಳುವುದಾಗಿದೆ. ಆದರೆ ನೆನಪಿಟ್ಟುಕೊಳ್ಳಿರಿ, ಒಬ್ಬನು ನಾನು ಯಾರ ಹಣವನ್ನು ಲಪಟಾಯಿಸಿಲ್ಲ, ಮನೆಗೆ ಕನ್ನ ಹಾಕಿಲ್ಲ, ಕಳ್ಳತನ ಮಾಡಿಲ್ಲ, ದುರ್ನೋಟ ಬೀರಿಲ್ಲ, ವ್ಯಭಿಚಾರ ಮಾಡಿಲ್ಲ ಆದುದರಿಂದ ನಾನು ಒಳ್ಳೆಯವನು ಎಂದು ವಾದಿಸುವುದಾದರೆ ಅಂತಹ ಒಳಿತು ಜ್ಞಾನಿಗಳ ಮುಂದೆ ಹಾಸ್ಯಾಸ್ಪದವಾಗಿದೆ. ಏಕೆಂದರೆ ಅವನು ಇಂತಹ ಕೃತ್ಯಗಳನ್ನು ಮಾಡಿದರೆ, ಕದ್ದರೆ ಅಥವಾ ಡಕಾಯಿತಿ ನಡೆಸಿದರೆ ಅವನು ಶಿಕ್ಷಿಸಲ್ಪಡುವನು. ಆದುದರಿಂದ ಜ್ಞಾನಿಗಳು ಇವುಗಳನ್ನು ಒಳಿತುಗಳು ಎಂದು ಪರಿಗಣಿಸಲಾರರು. ವಾಸ್ತವಿಕ ಒಳಿತು ಮಾನವರ ಸೇವೆ ಮಾಡುವುದು ಮತ್ತು ಅಲ್ಲಾಹನ ಮಾರ್ಗದಲ್ಲಿ ಪರಿಪೂರ್ಣ ಸತ್ಯ ಮತ್ತು ನಿಷ್ಠೆ ಪ್ರಕಟಿಸುವುದಾಗಿದೆ. ಅಲ್ಲಾಹನ ಮಾರ್ಗದಲ್ಲಿ ಜೀವಾರ್ಪಣೆ ಮಾಡಲು ಸಿದ್ಧನಾಗಿರುವುದು ಸಹ ಒಳಿತಾಗಿದೆ. ಆದುದರಿಂದ ಅಲ್ಲಾಹನು ಹೀಗೆ ಹೇಳಿದ್ದಾನೆ: **ಇನ್ನಲ್ಲಾಹ ಮಅಲ್ಲದೀನತ್ತಖವ್ ವಲ್ಲದೀನಹುಮ್ ಮುಹ್‌ಸಿನೂನ್.** ನಿಶ್ಚಯವಾಗಿಯೂ ಭಯಭಕ್ತಿಯುಳ್ಳವರ ಮತ್ತು ಸತ್ಕರ್ಮ ಮಾಡುವವರ ಜೊತೆಯಲ್ಲಿ ಅಲ್ಲಾಹನಿದ್ದಾನೆ. (6:129). ಆದುದರಿಂದ ಚೆನ್ನಾಗಿ ನೆನಪಿಡಿರಿ, ಕೇವಲ ಕೆಡುಕುಗಳಿಂದ ರಕ್ಷಣೆ ಪಡೆಯುವುದು ಮಾತ್ರ ಯಾವುದಾದರೂ ರೀತಿಯಲ್ಲಿ ಒಳಿತೆಂದು ಗಣಿಸಲ್ಪಡಲಾರದು. ಅದರೊಂದಿಗೆ ಸತ್ಕರ್ಮಗಳು ಇರಬೇಕಾದುದು ಅನಿವಾರ್ಯವಾಗಿದೆ.

ಸುಳ್ಳು ಹೇಳುವುದು, ಬಹಳ ದೊಡ್ಡ ಕೆಡುಕು, ಮತ್ತು ಪಾಪ ಕೃತ್ಯವಾಗಿದೆ, ಈ ಕೆಡುಕಿನಿಂದ ರಕ್ಷಿಸಿಕೊಳ್ಳಬೇಕೆಂದು ಉಪದೇಶಿಸುತ್ತಾ ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: ಪವಿತ್ರ ಖುರ್ಆನ್‌ನಲ್ಲಿ ಸಾವಿರಾರು ಆಜ್ಞೆಗಳಿವೆ. ಆದರೆ ಅವುಗಳಿಗೆ ಜನರು ಬದ್ಧರಾಗಿರುವುದಿಲ್ಲ ಎಂದು ನಾನು ಕಂಡಿದ್ದೇನೆ. ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ಸಹ ಪವಿತ್ರ ಖುರ್ಆನಿನ ಆಜ್ಞೆಗಳಿಗೆ ವಿರುದ್ಧವಾಗಿ ವರ್ತಿಸುತ್ತಾರೆ. ಕೆಲವು ಅಂಗಡಿ ವ್ಯಾಪಾರಿಗಳು ಸುಳ್ಳು ಹೇಳುತ್ತಾರೆ. ಸುಳ್ಳಿಗೆ ಮಸಾಲೆ ಸೇರಿಸಿ ಹೇಳುತ್ತಾರೆ. ಅಲ್ಲಾಹನು ಸುಳ್ಳು ಹೇಳುವುದನ್ನು ಮಾಲಿನ್ಯ, ಕೊಳಕು ಎಂದು ಹೇಳಿದ್ದಾನೆ. ಕೆಲವು ಜನರು ಅತಿಶಯೋಕ್ತಿಗಳನ್ನು ಬಳಸಿ ಸುಳ್ಳು ಹೇಳುತ್ತಾರೆ. ಮತ್ತು ಅದು ಪಾಪಕೃತ್ಯ ಎಂದು ಭಾವಿಸುವುದಿಲ್ಲ. ಅವರು ತಮಾಷೆಗಾಗಿ ಸಹ ಸುಳ್ಳು ಹೇಳುತ್ತಾರೆ. ಆದರೆ ಸುಳ್ಳನ್ನು ಎಲ್ಲ ರೀತಿಗಳಲ್ಲೂ ವರ್ಜಿಸದವನು ಸಿದ್ದೀಖ್ ಎಂದು ಕರೆಯಲ್ಪಡಲಾರನು.

ಮತ್ತೊಂದು ಶ್ರೇಷ್ಠ ಗುಣ, ತಪ್ಪುಗಳನ್ನು ಮರೆಮಾಡುವುದಾಗಿದೆ. ಅದು ಸದ್ಗುಣ ಮಾತ್ರವಲ್ಲ ಅನೇಕ ಜಗಳಗಳಿಂದಲೂ ಗಲಭೆ ಗೊಂದಲಗಳಿಂದಲೂ ಆ ಮೂಲಕ ತನ್ನನ್ನು ರಕ್ಷಿಸುತ್ತಾನಲ್ಲದೆ ಲೋಕವನ್ನೂ ರಕ್ಷಿಸುತ್ತಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಜಮಾಅತ್‌ನಲ್ಲಿ ಪರಸ್ಪರ ಜಗಳಗಳು ಬಹಳ ಆಗುತ್ತಿವೆ. ಸಾಮಾನ್ಯ ಜಗಳವಾದಾಗ ಸಹ ಒಬ್ಬರಿನ್ನೊಬ್ಬರ ಗೌರವಕ್ಕೆ ಕುಂದುಂಟು ಮಾಡಲಾಗುತ್ತಿದೆ. ಅಲ್ಲಾಹನ ಒಂದು ಗುಣ "ಸತ್ತಾರ್" (ಮರೆ ಮಾಡುವವನು)

ಎಂದಾಗಿದೆ. ಹೀಗಿರುವಾಗ ಜನರು ತಮ್ಮ ಸಹೋದರರ ಮೇಲೆ ಏಕೆ ದಯೆದೋರುವುದಿಲ್ಲ, ಕ್ಷಮಿಸುವುದಿಲ್ಲ ಮತ್ತು ತಪ್ಪುಗಳನ್ನು ಮರೆಮಾಡುವುದಿಲ್ಲ. ಮತ್ತು ಸಹೋದರರ ಗೌರವದ ಮೇಲೆ ಆಕ್ರಮಣ ಮಾಡುವುದರಿಂದ ತಮ್ಮನ್ನು ರಕ್ಷಿಸುವುದಿಲ್ಲ. ಒಂದು ಚಿಕ್ಕ ಪುಸ್ತಕದಲ್ಲಿ ಹೀಗೆ ಬರೆದುದಾಗಿ ನಾನು ಕಂಡಿದ್ದೇನೆ. ಒಬ್ಬ ದೊರೆ ಪವಿತ್ರ ಖುರ್‌ಆನ್ ಸ್ವಂತ ಅಕ್ಷರದಲ್ಲಿ ಬರೆಯುತ್ತಿದ್ದನು. ಒಬ್ಬ ಮುಲ್ಲಾ ಹೇಳಿದನು, ನೀವು ಈ ವಚನ ತಪ್ಪಾಗಿ ಬರೆದಿರುವಿರಿ. ಆಗ ಆ ದೊರೆ ಆ ವಚನದ ಮೇಲೆ ಒಂದು ವೃತ್ತ ರಚಿಸಿ ಹೇಳಿದನು, ಅದನ್ನು ತೆಗೆದು ಹಾಕಲಾಗುವುದು ಎಂದು. ಮುಲ್ಲಾ ಅಲ್ಲಿಂದ ಹೋದ ನಂತರ ದೊರೆ ತಾನು ಬರೆದ ವಚನದ ಮೇಲೆ ಎಳೆದಿದ್ದ ವೃತ್ತವನ್ನು ಅಳಿಸಿದನು. ಆಗ ದೊರೆಯೊಂದಿಗೆ ನೀವು ಹಾಗೆ ಏಕೆ ಮಾಡಿದಿರಿ ಎಂದು ವಿಚಾರಿಸಿದಾಗ ದೊರೆ ಹೇಳಿದರು: ವಾಸ್ತವಿಕವಾಗಿ ಮುಲ್ಲಾ ಹೇಳಿದುದು ತಪ್ಪಾಗಿತ್ತು. ಆದರೆ ಅವರ ಮನಸ್ಸಿಗೆ ನೋವಾಗದಿರಲು ನಾನು ಹಾಗೆ ಮಾಡಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅನ್ಯರ ತಪ್ಪುಗಳನ್ನು ಕಂಡು ಹಿಡಿದು ಅದನ್ನು ಬಹಿರಂಗಪಡಿಸುವುದು ದುರಹಂಕಾರವೂ ರೋಗವೂ ಆಗಿದೆ. ಇಂತಹ ಕೆಲಸಗಳನ್ನು ಮಾಡುವುದರಿಂದ ಆತ್ಮ ಕೆಟ್ಟು ಹೋಗುತ್ತದೆ. ಇದರಿಂದ ರಕ್ಷಿಸಿಕೊಳ್ಳಬೇಕು. ಇವೆಲ್ಲಾ ತಖ್ವದಲ್ಲಿ ಸೇರಿವೆ. ಆಂತರಿಕ ಮತ್ತು ಬಾಹ್ಯ ವಿಷಯಗಳಲ್ಲಿ ತಖ್ವದಿಂದ ವರ್ತಿಸುವವರು ದೇವದೂತರ ಜೊತೆ ಸೇರಿಸಲ್ಪಡುತ್ತಾರೆ. ಏಕೆಂದರೆ ಅಂತಹ ಜನರಲ್ಲಿ ಯಾವುದೇ ಉದ್ಧಟತನ ಇರುವುದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಆದುದರಿಂದ ನೀವು ತಖ್ವವನ್ನು ಗಳಿಸಿರಿ. ಏಕೆಂದರೆ ತಖ್ವ ಗಳಿಸಿದ ನಂತರವೇ ಅಲ್ಲಾಹನ ಅನುಗ್ರಹಗಳು ಆಗಮಿಸುತ್ತವೆ. ಮುತ್ತಖಿಯಾದವನು ಲೋಕದ ವಿಪತ್ತುಗಳಿಂದ ರಕ್ಷಿಸಲ್ಪಡುತ್ತಾನೆ. ಅಲ್ಲಾಹನು ಅವನ ಕುಂದು ಕೊರತೆಗಳನ್ನು ಮರೆಮಾಡುತ್ತಾನೆ. ಅನೇಕ ಜನರು ತಮ್ಮ ಸಹೋದರರ ಮೇಲೆ ತಕ್ಷಣ ಕೆಟ್ಟ ಅಪವಾದ ಹೊರಿಸುತ್ತಾರೆ. ಹಾಗೆ ವರ್ತಿಸುವುದರಿಂದ ತಮ್ಮನ್ನು ರಕ್ಷಿಸಿಕೊಳ್ಳಿರಿ. ಮಾನವರಿಗೆ ಪ್ರಯೋಜನ ಉಂಟಾಗುವ ರೀತಿಯಲ್ಲಿ ವರ್ತಿಸಿರಿ. ನಿಮ್ಮ ಸಹೋದರರಿಗೆ ಸಹಾನುಭೂತಿ ತೋರಿಸಿರಿ. ನೆರೆಹೊರೆಯವರೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸಿರಿ. ನಿಮ್ಮ ಸಹೋದರರೊಂದಿಗೆ ಒಳ್ಳೆಯ ರೀತಿಯಲ್ಲಿ ಸಹಬಾಳ್ವೆ ಮಾಡಿರಿ. ಎಲ್ಲದಕ್ಕಿಂತಲೂ ಮೊದಲು ಶಿರ್ಕ್‌ನಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ. ಅದು ತಖ್ವದ ಪ್ರಾರಂಭದ ಇಟ್ಟಿಗೆಯಾಗಿದೆ.

ತನ್ನ ಸಹೋದರನು ಮಾಡಿದ ತಪ್ಪನ್ನು ನೋಡಿದಾಗ ಹೇಗೆ ವರ್ತಿಸಬೇಕು ಎನ್ನುವುದರ ಬಗ್ಗೆ ಇನ್ನಷ್ಟು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದರು: ನನ್ನ ಜಮಾಅತ್ ಬಗ್ಗೆ ನನಗೆ ದೊಡ್ಡ ದುಃಖವಿದೆ. ಜನರು ಅಲ್ಪ ಸ್ವಲ್ಪ ಕಾರಣಗಳಿಂದ ಉದ್ರೇಕಿಸಲ್ಪಡುತ್ತಿದ್ದಾರೆ. ಎಲ್ಲರ ಮುಂದೆ ಒಬ್ಬನನ್ನು ಅವಿವೇಕಿ ಎಂದು ಕರೆಯುವುದು ಸಹ ಬಹಳ ದೊಡ್ಡ ತಪ್ಪಾಗಿದೆ. ನೀವು ನಿಮ್ಮ ಒಬ್ಬ ಸಹೋದರನು ತಪ್ಪು ಮಾಡುವುದು ಕಂಡರೆ ಅವನಿಗೋಸ್ಕರ ಪ್ರಾರ್ಥಿಸಿರಿ. ಅಲ್ಲಾಹನು ಅವನನ್ನು ಸರಿದಾರಿಗೆ ತರಲಿ. ಅದರ ಬಗ್ಗೆ ಡಂಗುರ ಸಾರಬೇಡಿರಿ. ನೀವು ಈ ಉಪದೇಶ ಪ್ರಕಾರ ವರ್ತಿಸಿದರೆ ರಕ್ಷಿಸಲ್ಪಡುವಿರಿ. ಒಬ್ಬನ ಮಗನು ಕೆಟ್ಟ ಕೆಲಸ ಮಾಡಿದರೆ ಅವನ ತಂದೆ ಅವನನ್ನು ಬಹಿರಂಗವಾಗಿ ಅಪಮಾನಿಸುವುದಿಲ್ಲ. ಅವನನ್ನು ಒಂದು ಬದಿಗೆ ಕರೆದು ಅವನೊಂದಿಗೆ ಹೇಳುತ್ತಾನೆ, ನೀನು ಮಾಡುವ ಕೆಲಸ ಕೆಟ್ಟದು. ಹಾಗೆ ಮಾಡಬೇಡ ಎಂದು ಹೇಳುತ್ತಾನೆ. ನೀವು ನಿಮ್ಮ ಮಕ್ಕಳೊಂದಿಗೆ ಸಹಿಷ್ಣುತೆಯಿಂದಲೂ ಪ್ರೀತಿಯಿಂದಲೂ ವರ್ತಿಸುವ ಹಾಗೆ ನೀವು ಪರಸ್ಪರ ಸಹೋದರರೊಂದಿಗೆ ಸಹ ವರ್ತಿಸಿರಿ. ಯಾರ ಸ್ವಭಾವ ಗುಣಗಳು ಒಳ್ಳೆಯದಾಗಿಲ್ಲವೋ ನನಗೆ ಅವನ ವಿಶ್ವಾಸದ ಬಗ್ಗೆ ಅಪಾಯ ಕಾಣುತ್ತದೆ. ಏಕೆಂದರೆ ಅವನಲ್ಲಿ ದುರಹಾಂಕಾರದ ಒಂದು ಬೇರಿರುತ್ತದೆ. ಅಲ್ಲಾಹನು ಕರುಣೆದೋರದಿದ್ದರೆ ಅವನು ನಾಶವಾಗುವನು.

ತೌಬ ಮಾಡುತ್ತಾ ಇರಬೇಕು. ಇಸ್ತಿಗ್‌ಫಾರ್ ಮಾಡುತ್ತಾ ಇರಬೇಕು. ಪ್ರತಿ ಸಮಯ ದುಆ ಮಾಡುತ್ತಾ ಇರಬೇಕು. ನಮಾಝ್ ದುಆ ಅಂಗೀಕಾರಗೊಳ್ಳುವ ಕೀಲಿಗೈ ಆಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾವು ಜಯಶಾಲಿಯಾಗಲು ನಮಗಿರುವ ಆಯುಧಗಳು ಇಸ್ತಿಗ್‌ಫಾರ್, ತೌಬ ಧಾರ್ಮಿಕ ಜ್ಞಾನ ಗಳಿಸುವಿಕೆ, ಅಲ್ಲಾಹನ ಮಹೋನ್ನತ ಸ್ಥಾನವನ್ನು ಗುರುತಿಸುವುದು, ಐದು ಹೊತ್ತಿನ ನಮಾಝ್‌ಗಳನ್ನು ಅನುಷ್ಠಿಸುವುದು ಆಗಿವೆ. ನಮಾಝ್ ಪ್ರಾರ್ಥನೆಗಳನ್ನು ಅಂಗೀಕರಿಸುವಂತೆ ಮಾಡುವ ಕೀಲಿಗೈ ಆಗಿದೆ. ನಮಾಝ್ ಮಾಡುವಾಗ ಪ್ರಾರ್ಥನೆ ಮಾಡಿರಿ. ನಿರ್ಲಕ್ಷ್ಯತೆ ತೋರಿಸಬೇಡಿರಿ. ಅಲ್ಲಾಹನ ಹಕ್ಕುಗಳಿಗೆ ಸಂಬಂಧಿಸಿ ಮತ್ತು ಜನರ ಹಕ್ಕುಗಳಿಗೆ ಸಂಬಂಧಿಸಿ ಪ್ರತಿಯೊಂದು ಕೆಡುಕಿನಿಂದ ನಿಮ್ಮನ್ನು ರಕ್ಷಿಸಿಕೊಳ್ಳಿರಿ.

ಅಲ್ಲಾಹನು ನಮಗೆ ಈ ಉನ್ನತ ಮಟ್ಟಗಳನ್ನು ತಲಪಲು ಭಾಗ್ಯ ನೀಡಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿರುವ ನಾವು ಅವರನ್ನು ಅಲ್ಲಾಹನು ಯಾವ ಉದ್ದೇಶಕ್ಕಾಗಿ ನಿಯೋಜಿಸಿರುವನೋ ಆ ಉದ್ದೇಶಲಕ್ಷ್ಯಗಳನ್ನು ಈಡೇರಿಸಲು ನಮ್ಮ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನು ನಾವು ಬಳಸುವವರಾಗುವಂತೆ ಅಲ್ಲಾಹನು ಮಾಡಲಿ. ಲೋಕಕ್ಕೆ ಈ ವಾಸ್ತವಿಕತೆಯನ್ನು ಮನವರಿಕೆ ಮಾಡಿ ಕೊಡುವವರನ್ನಾಗಿಯೂ ನಮ್ಮನ್ನು ಅಲ್ಲಾಹನು ಮಾಡಲಿ – ಆಮೀನ್.

-------------*****-------------

***Friday Sermon delivered by Hadrath Khaleefatul Masih Al Khamis(atba)***

*At, Jalsa Ghah, Germany. on 25-08-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon